ಆ) ತಜ್ಞರಿಂದ ಮತ್ತು ಸದಸ್ಯರು ಸ್ವತಃ ಪರಾಮರ್ಶಿಸಿದ ನಂತರ, ಆಯ್ಕೆ ಸಮಿತಿಯು ಶಿಫಾರಸ್ಸು ಮಾಡಿದ ಪುಸ್ತಕಗಳನ್ನು ಪರಿಶೀಲಿಸಿ ಒದಗಿಸಿರುವ ಹಣ ಚೌಕಟ್ಟಿನಲ್ಲಿ ಖರೀದಿಸುವುದು.

ಇ) ಇಲ್ಲ.

೧೨.೦೦ noon

ಶ್ರೀ ಎಸ್. ಮುನಿಶಾಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಯೋಜನೆಯಡಿಯಲ್ಲಿ ಎರಡು ಸಗಟು ಖರೀದಿ ಸಮಿಗಳು ಶಿಕ್ಷಣ ಇಲಾಖೆಯಲ್ಲಿ, ಇವೆಯೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ಸಮಿತಿಗಳಲ್ಲಿ ಯಾರು ಯಾರು ಇದ್ದಾರೆ ಎಂಬುದು ಗೊತ್ತಾಗಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಈ ಯೋಜನೆ ೧೯೬೯–೭೦ ರಿಂದ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ೧೯೮೭–೮೮ ರಿಂದ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಈ ಸಗಟು ಖರೀದಿ ಯೋಜನೆಗಾಗಿ ಬಜೆಟ್‌ನಲ್ಲಿ ೫೦ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟು ಹಣದಲ್ಲಿ ಕೇವಲ ೨೩ ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. ಬಾಕಿ ಇರತಕ್ಕ ಹಣವನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣ ಏನು ? ತಜ್ಞರ ಸಮಿತಿಯಲ್ಲಿ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಅನೇಕ ಬರಹಗಾರರ ಪುಸ್ತಕಗಳನ್ನು ಕಡೆಗಣಿಸಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಸರ್ಕಾರಿ ನೌಕರರು ಲೇಖಕರಾಗಿದ್ದರೆ, ಅವರ ಪುಸ್ತಕಗಳನ್ನು ಖರೀದಿಸುವುದರಿಂದ, ಅವರಿಗೆ ಪ್ರಾಶಸ್ತ್ಯ ಹಾಗೂ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೇ ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಬರಹಗಾರರನ್ನು ಪ್ರೋತ್ಸಾಹಿಸಲು ಸರ್ಕಾರದವರು ವಿಶೇಷ ಯೋಜನೆಯನ್ನು ಏನಾದರು ರೂಪಿಸಿದ್ದಾರೆಯೇ ? ಒಂದು ವೇಳೆ ರೂಪಿಸದೇ ಹೋದರೆ, ಮಾನ್ಯಮಂತ್ರಿಗಳು ತಕ್ಷಣ ಈ ಯೋಜನೆಯನ್ನು ರೂಪಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮೊದಲನೇ ಸಮಿತಿಯಲ್ಲಿ ಕಮೀಷನರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ರವರು, ಡೈರಕ್ಟರ್, ಕನ್ನಡ ಅಂಡ್ ಕಲ್ಚರ್ ಅವರು ಹಾಗೂ ಡೈರಕ್ಟರ್ ಆಫ್ ಲೈಬ್ರರೀಸ್‌ರವರು ಈ ಮೂರು ಮಂದಿ ಜೊತೆಗೆ ಅಧಿಕಾರೇತರ ಸದಸ್ಯರಾದ ಶಾಸಕರೂ ಇದ್ದಾರೆ. ಶ್ರೀ ಕರಂಬಳ್ಳಿ ಸಂಜೀವಶೆಟ್ಟಿ, ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ, ಡಾ॥ ಕಾಲಕೋಟಿ, ಶ್ರೀ ಭೀಮನೇನಿ ಕೊಂಡಯ್ಯ, ಶ್ರೀ ಎಂ. ವಿಶ್ವನಾಥ್ ಮತ್ತು ಶ್ರೀ ರೋಷನ್‌ಬೇಗ್ ಅವರು ಇದ್ದಾರೆ. ಇದೇರೀತಿ ಗ್ರಂಥಾಲಯ ಇಲಾಖೆಯಲ್ಲಿ, ಗ್ರಂಥಾಲಯ ನಿರ್ದೇಶಕರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇವರ ಜೊತೆಗೆ ೧೪ ಮಂದಿ ಸದಸ್ಯರೂ ಇದ್ದಾರೆ. ಇವರುಗಳಲ್ಲಿ ಅನೇಕ ಪರಿಣತರು, ಸಾಹಿತಿಗಳೂ ಇದ್ದಾರೆ. ಒಟ್ಟು ೧೪ ಮಂದಿ ಸದಸ್ಯರು ಈ ಸಮಿತಿಯಲ್ಲಿದ್ದಾರೆ. ಈ ಎರಡು ಸಮಿತಿಗಳೂ ಸಭೆ ಸೇರಿ, ಪುಸ್ತಕಗಳಿಗಾಗಿ ಬಂದ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆಗಳಿಗನುಸಾರವಾಗಿ ಆಯ್ಕೆ ಪಟ್ಟಿ ತಯಾರು ಮಾಡಿ, ತದನಂತರ ಕೊಂಡುಕೊಳ್ಳುವುದಕ್ಕೆ ಸರ್ಕಾರಕ್ಕೆ ಶಿಫಾರಸ್ ಮಾಡುತ್ತಾರೆ.

ಶ್ರೀ ಎಸ್. ಮುನಿಶಾಮಪ್ಪ.—ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬರಹಗಾರರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಸರ್ಕಾರದವರು ವಿಶೇಷ ಯೋಜನೆಯನ್ನು ರೂಪಿಸಿದ್ದಾರೆಯೇ ಎಂಬ ಬಗ್ಗೆ ಮಾನ್ಯಮಂತ್ರಿಗಳಿಂದ ಉತ್ತರ ಬೇಕಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಇವರಿಗೆ ಪ್ರತ್ಯೇಕವಾದ ನಿರ್ದೇಶನ ಇದ್ದಹಾಗೆ ಇಲ್ಲ, ಇದರ ಬಗ್ಗೆ ನೋಡುತ್ತೇನೆ. ಒಟ್ಟಾರೆ ಎಲ್ಲಾ ಸಾಹಿತಿಗಳಿಂದ, ಬರಹಗಾರರಿಂದ ಅರ್ಜಿಗಳನ್ನು ಕರೆದು, ಬಂದ ಅರ್ಜಿಗಳನ್ನು ನೋಡುತ್ತಾರೆ. ಪ್ರತ್ಯೇಕವಾಗಿ ಹಿಂದುಳಿದ ವರ್ಗದವರಿಗೆ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದ ಲೇಖಕರಿಗೆ ಏನಾದರೂ ಬೇರೆ ಒಂದು ರೀತಿಯ ಪ್ರೋತ್ಸಾಹ ಕೊಡುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಆದರೂ ಸಹ, ಇಂದಿನ ಪ್ರಶ್ನೆ ಪಟ್ಟಿಯಲ್ಲಿ ಇರತಕ್ಕ ಸದಸ್ಯರು ಹಾಜರಿದ್ದರೆ, ಅವರಿಗೆ ಒಂದೇ ಒಂದು ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿ ಕಾವುಗಾರಿ ಕುರಿತಂ

೯೪೩ (೩೦೮೦) ಶ್ರೀ ಡಿ. ಜಿ, ಬಸವನಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೇ :—

ಅ) ಶಿವಮೊಗ್ಗ ನಗರದಲ್ಲಿ ಪೂರ್ಣವಾಗುತ್ತಿರುವ ಜಿಲ್ಲಾಧಿಕಾರಿಗಳ ಕಚೇರಿಯ ಕಾಮಗಾರಿ ಕೆಲಸ ಸ್ಥಗಿತವಾಗಿರಲು ಕಾರಣವೇನು?

ಆ) ಕಟ್ಟಡದ ತಳಪಾಯದಲ್ಲಿ ಬಿರುಕು ಕಾಣಿಸಿಕೊಂಡಿರುವುದು ನಿಜವೇ?

ಇ) ಹಾಗಿದ್ದಲ್ಲಿ ಇಲಾಖೆಯವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಹಣದ ಸಿಮೆಂಟ್ ಮತ್ತು ಸ್ಟೀಲಿನ ಕೊರತೆಯಿಂದಲೂ, ಕಟ್ಟಡ ನಿರ್ಮಾಣ ಕಾರ್ಯ ನಿಧಾನವಾಗಿತ್ತು. ಈಗ ಕೆಲಸ ಪ್ರಗತಿಯಲ್ಲಿದೆ.

ಆ) ಇಲ್ಲ.

ಇ) (ಅ)ಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ ನನಗೆ ಸ್ವಲ್ಪ ನಂಬಿಕೆ ಸಾಲದಾಗಿದೆ. ಕಾರಣ ಇಷ್ಟೇ, ಅವರ ಇಲಾಖೆಯಿಂದ ತರಿಸಿಕೊಂಡಂತ ವರದಿಯನ್ನು ಹೇಳುತ್ತಿದ್ದಾರೆ. ನಾನು ಸ್ಥಳೀಯ ಶಾಸಕನಾಗಿ ಹೇಳುತ್ತಿದ್ದೇನೆ, ಅಲ್ಲಿಯ ಸಾರ್ವಜನಿಕರು ಹಾಗೂ ಜನ ಸಾಮಾನ್ಯರು, ಆ ಕಟ್ಟಡದ ತಳಪಾಯದಲ್ಲಿ ಬಿರುಕು ಬಂದಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರೂ ಕೂಡ ತಜ್ಞರು. ಅವರೇ ಹೋಗಿ ಕಟ್ಟಡವನ್ನು ಪರಿಶೀಲನೆ ಮಾಡಿದರೆ ಒಳ್ಳೆಯದು. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟುತ್ತಿರತಕ್ಕಂಥ ಕಟ್ಟಡದಲ್ಲಿ ಬಿರುಕು ಬಂದಿದೆ ಎಂದರೆ ಅದು ಸಾಮಾನ್ಯವಾದ ವಿಷಯವಲ್ಲ, ಹಿಂದೆ ಮೈಸೂರಿನ ಆಸ್ಪತ್ರೆ ಕಟ್ಟಡದ ಕೆಲಸದಲ್ಲೂ ಇದೇ ರೀತಿ ಆಗಿ, ಅದರ ಬಗ್ಗೆ ಈಗ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅದುದರಿಂದ ಈ ಕಟ್ಟಡದ ಬಗ್ಗೆ ಈಗಲೇ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಿ. ಈ ರೀತಿ ಕಟ್ಟಡದ ತಳಪಾಯದ ಮಟ್ಟದಲ್ಲಿ ಬಿರುಕಾಗಿದ್ದರೆ ಅದನ್ನು ಸರಿಪಡಿಸಿ ಕಟ್ಟಡವನ್ನು ಮುಂದುವರಿಸಿದರೆ ಒಳ್ಳೆಯದು. ಇದರ ಬಗ್ಗೆ ನಾನು ಮಾನ್ಯ ಸಚಿವರಿಂದ ಒಂದು ಭರವಸೆಯನ್ನು ನಿರೀಕ್ಷಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಮತ್ತೊಮ್ಮೆ ತಜ್ಞರಿಂದ ಪರಿಶೀಲನೆ ಮಾಡಿಸುತ್ತೇನೆ.

ಪ್ರಶ್ನೆ ಸಂಖ್ಯೆ ೯೪೪(೩೦೪೬) ಶ್ರೀ ಬಿ. ಎಸ್. ಯಡಿಯೂರಪ್ಪ(ಮಾನ್ಯ ಸದಸ್ಯರ ಗೈರುಹಾಜರಿ)

ಮುಂಧೋಳ ತಾಲ್ಲೂಕಿನ ಮಿರ್ಜಿ ಮಲ್ಲಾಪುರ ಸೇತುವೆ ಬಗ್ಗೆ

೯೪೪(೩೦೨೪) ಬಿ. ಜಿ. ಜಮಖಂಡಿ(ಮುಧೋಳ).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮುದೋಳ ತಾಲ್ಲೂಕಿನ ಮಿರ್ಜಿ ಮಲ್ಲಾಪುರ ಹಳ್ಳಕ್ಕೆ ಸೇತುವೆ ಕಟ್ಟಲು ಯಾವಾಗ ಮಂಜೂರಾತಿ ನೀಡಲಾಯಿತು?

ಆ) ಅದರ ಅಂದಾಜು ವೆಚ್ಚ ಎಷ್ಟು?

ಇ) ಸೇತುವೆಯ ಕೆಲಸವನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ ಮತ್ತು ಆ } ಸದರಿ ಕಾಮಗಾರಿಯು ಸರಿಯಾದ ಹೆಸರು ಮುಧೋಳ ತಾಲ್ಲೂಕಿನ ಮಲ್ಲಾಪುರ ಹತ್ತಿರ ಉತ್ತರಕ್ಕೆ ಮಿರ್ಜಿ ಐ. ಸಿ. ಆರ್. ಸಿ. ರಸ್ತೆ ಮೇಲೆ ಕಿ. ಮೀ. ೧೫.೦೦ ರಲ್ಲಿ ಹಿರೇಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ. ಈ ಸೇತುವೆ ಕಾಮಗಾರಿಗೆ ಸರ್ಕಾರಿ ಆದೇಶ ಕ್ರಮ ಸಂಖ್ಯೆ ಪಿಡಬ್ಲ್ಯೂಡಿ ೨೯೪ ಸಿಬಿಆರ್ ೮೬ ಬೆಂಗಳೂರು ದಿನಾಂಕ ೨೯ನೇ ಡಿಸೆಂಬರ್ ೧೯೮೬ ರಲ್ಲಿ ರೂ. ೮.೦೦ ಲಕ್ಷಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.